**PROCEEDINGS OF THE SPECIAL MEETING OF BOARD OF MANAGEMENT OF KVAFSU, BIDAR HELD ON 06-02-2025, 10.30 AM AT CONFERENCE HALL, VETERINARY COLLEGE, HEBBAL, BANGALORE**

## I. MEMBERS PRESENT

### (A) Ex –Officio Members

| | | |
|---|---|---|
| 1. | The Hon'ble Vice Chancellor<br>KVAFSU, Bidar | Chairman |
| 2. | The Principal Secretary to Government<br>Law Department, Bangalore | Member |
| 3. | Director<br>Dept. of AH & VS, Bangalore | Member |
| 4. | Director,<br>Fisheries Department<br>Bangalore | Member |
| 5. | The Registrar,<br>Member Secretary<br>KVAFSU, Bidar | Member |

### (B) Other Members

| | | |
|---|---|---|
| 1. | Smt.Latha.D.H<br>Women Social Worker<br>Challekere | Member |
| 2. | Dr.Venkatachala.V.S<br>Rural Educationist<br>Doddaballapur | Member |
| 3. | Dr.H.M.Jayaprakash<br>Scientist<br>Heddur Thirthhalli | Member |
| 4. | Sri.Sangappa Walikar<br>Progressive Livestock Farmer<br>Kavadimatti, Muddebihal | Member |
| 5. | Sri. Baswaraj.P.Bhatmurge<br>Progressive Fisherman<br>Channabasavanagar, Bidar | Member |
| 6. | Dr.Shirish Upadhaya<br>Dean, MAFSU<br>Nagpur | Member |

### Members Absent

| | | |
|---|---|---|
| 1. | The Principal Secretary to Government<br>Animal Husbandry & Fisheries Department<br>Bangalore | Member |
| 2. | The Principal Secretary to Government<br>Finance Department<br>Bangalore | Member |

The Registrar & Member Secretary welcomed the Hon'ble Members of the Board of Management to the Special Meeting of the Board of Management. The Hon'ble Vice Chancellor and Chairman welcomed all the Members of the Board and informed the Registrar & Member Secretary to proceed with the presentation of the agenda for the meeting.

**Item No.1** ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಇಲ್ಲಿನ ಬೋಧಕೇತರ ಹುದ್ದೆಗಳ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ಚರ್ಚಿಸುವ ಕುರಿತು

**ನಿರ್ಣಯ**

ಸದರಿ ಪ್ರಸ್ತಾವನೆ ಕುರಿತು ಕುಲಸಚಿವರು ಸವಿವರವಾಗಿ 2010 ರಿಂದ 2024 ರವರೆಗೆ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಸಂಪೂರ್ಣ ಮಾಹಿತಿಯೊಂದಿಗೆ ನಿಗದಿತ ನಮೂನೆಯಲ್ಲಿ ಸರ್ಕಾರಕ್ಕೆ ಸಲ್ಲಿಸಿರುವ ಮಾಹಿತಿ ಸಭೆಯ ಗಮನಕ್ಕೆ ತರಲಾಯಿತು. ಮುಂದುವರೆದು ಸದರಿ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ಸರ್ಕಾರದ ನಿಯಮಾನುಸಾರ ಹಾಗೂ ICAR ಮತ್ತು VCI ಯಿಂದ ಕಾಲ ಕಾಲಕ್ಕೆ ನೀಡಲಾಗುವ ಮಾನದಂಡಗಳನ್ವಯ ಸರ್ಕಾರದ ಜಂಟಿ ಕಾರ್ಯದರ್ಶಿ, ಪಶು ಸಂಗೋಪನೆ ಮತ್ತು ಮೀನುಗಾರಕೆ ಇಲಾಖೆ, ಬೆಂಗಳೂರು ಇವರ ಜೊತೆಗೆ ಈಗಾಗಲೇ ಎರಡು ಸಲ ಸುದೀರ್ಘವಾಗಿ ಚರ್ಚಿಸಿ ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಹಾಗೂ ಮುಂಬಡ್ತಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದಿಂದ ಸೂಚಿಸಲಾಗಿರುವ ನಿಯಮಗಳನ್ನು ಸೇರ್ಪಡಿಸಿ ಕರಡು ವೃಂದ ಮತ್ತು ನೇಮಕಾತಿ ನಿಯಮಾವಳಿ 2025 ತಯಾರಿಸಿ ಮುಂದಿನ ವ್ಯವಸ್ಥಾಪ ಮಂಡಳಿ ಸಭೆಯಲ್ಲಿ ಮಂಡಿಸುವುದಾಗಿ ಕುಲಸಚಿವರು ತಿಳಿಸಿರುತ್ತಾರೆ. ವ್ಯವಸ್ಥಾಪಕ ಮಂಡಳಿಯು ಚರ್ಚಿಸಿ ಕುಲಸಚಿವರ ಮನವಿಯಂತೆ ಕರಡು ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ತಯಾರಿಸಿ ವ್ಯವಸ್ಥಾಪಕ ಮಂಡಳಿ ಸಭೆಯಲ್ಲಿ ಮಂಡಿಸುವಂತೆ ತೀರ್ಮಾನಿಸಲಾಯಿತು.

**(ಕ್ರಮ:ಕುಸ)**

**Item No.02 ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ ಹೆಬ್ಬಾಳ, ಬೆಂಗಳೂರು ಇಲ್ಲಿನ ಬೋಧಕೇತರ ಹುದ್ದೆಗಳನ್ನು ವಿಶ್ವವಿದ್ಯಾಲಯದ ಬೋಧಕೇತರ ಹುದ್ದೆಗಳಿಗೆ ಸಮನಾಂತರಗೊಳಿಸಿ ವೇತನ ಪಾವತಿಸಿರುವುದನ್ನು ಲೆಕ್ಕ ಪರಿಶೋಧಕರು ಆಕ್ಷೇಪಣೆಯಲ್ಲಿಟ್ಟಿರುವ ಬಗ್ಗೆ.**

**ನಿರ್ಣಯ**

ಸದರಿ ಪ್ರಸ್ತಾವನೆ ಕುರಿತು ವ್ಯವಸ್ಥಾಪಕ ಮಂಡಳಿ ಸಭೆಯಲ್ಲಿ ಸುದೀರ್ಘ ವಾಗಿ ಚರ್ಚಿಸಿ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ಹುದ್ದೆಗಳನ್ನು ವಿಶ್ವವಿದ್ಯಾಲಯದ ಬೋಧಕೇತರ ಹುದ್ದೆಗಳಿಗೆ ಸಾಮಾನಂತರಗೊಳಿಸಿರುವ ಪ್ರಕರಣವು 2009 ರಿಂದ ಪ್ರಾರಂಭವಾಗಿದ್ದು ವಿಶ್ವವಿದ್ಯಾಲಯದ ಕಾಲಕ್ಕೆ ಕಾಲಕ್ಕೆ ಆಗಿರುವ ವ್ಯವಸ್ಥಾಪಕ ಮಂಡಳಿಯ ನಿರ್ಣಯ, ವಿಶ್ವವಿದ್ಯಾಲಯ ಮಟ್ಟದಲ್ಲಿ ಆಗಿರುವ ಸಮಿತಿಯ ನಿರ್ಣಯ ಹಾಗೂ ಸರ್ಕಾರದ ಕಾರ್ಯದರ್ಶಿಯವರ ಮಟ್ಟದಲ್ಲಿ ಆಗಿರುವ ಸಭೆಯ ನಿರ್ಣಯದಂತೆ ಹಾಗೂ ಈ ಸಂಬಂಧ ಸರ್ಕಾರ ಹಾಗೂ ಗೌರವಾನ್ವಿತ ಘನತೆವೆತ್ತ ರಾಜ್ಯಪಾಲರ ಪತ್ರದಂತೆ ಕೈಗೊಂಡಿರುವ ಕ್ರಮ ಆಗಿರುವುದರಿಂದ ವಿಶ್ವವಿದ್ಯಾಲಯದ ಲೆಕ್ಕಪರಿಶೋಧನೆಯ ಆಕ್ಷೇಪಣೆಗೆ ಸವಿವರವಾಗಿ ಉತ್ತರ ನೀಡಿ ಪುನ: ಪರಿಶೀಲಿಸಲು ಹಾಗೂ ಸದರಿ ಆಕ್ಷೇಪಣೆಯನ್ನು ಕೈಬಿಡಲು ವಿಶ್ವವಿದ್ಯಾಲಯ ಕೋರುವಂತೆ ವ್ಯವಸ್ಥಾಪಕ ಮಂಡಳಿಯು ಸೂಚಿಸಿರುತ್ತದೆ.

**(ಕ್ರಮ:ಕುಸ)**

**Item No.03 ದಿನಾಂಕ 01-04-2006 ರ ನಂತರ ವಿಶ್ವವಿದ್ಯಾಲಯದಲ್ಲಿ ಕಲಂ (8) ರಂತೆ ವರ್ಗಾಯಿತಗೊಂಡ ಹಾಗೂ ಬೇರೆ ವಿಶ್ವವಿದ್ಯಾಲಯದಿಂದ ಹಿಂದಿನ ಸೇವೆಯ ಆಧಾರದ ಮೇಲೆ ನೇರ ನೇಮಕಾತಿಗೊಂಡ ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ OPS ಮತ್ತು NPS ಅಳವಡಿಸಿಕೊಂಡಿರುವ ಕುರಿತು**

**ನಿರ್ಣಯ**

ವಿಶ್ವವಿದ್ಯಾಲಯದ ಅಧಿನಿಯಮ 2004 ಪರಿನಿಯಮ 2009 ಸರ್ಕಾರದ ಆದೇಶ 01-04-2006, 2007, 2018, 2020 ಹಾಗೂ ವಿಶ್ವವಿದ್ಯಾಲಯದ ಕಾಲಕ್ಕೆ ಕಾಲಕ್ಕೆ ಆಗಿರುವ ಹಿಂದಿನ ಸೇವಾ ಆಧಾರಿತ ನೇಮಕಾತಿಗಳು ಸದರಿ ನೇಮಕಾತಿ ಅಧಿಸೂಚನೆಗಳು ಹಾಗೂ ವ್ಯವಸ್ಥಾಪಕ ಮಂಡಳಿಯು ನಿರ್ಣಯಗಳ ಆದಾರದ ಮೇಲೆ ನೀಡಿರುವ ನೇಮಕಾತಿ ಆದೇಶಗಳು ಎಲ್ಲವೂ ಕೂಡ ಹಿಂದಿನ ಸೇವಾ ಆಧಾರ ಹಾಗೂ ವಿಶ್ವವಿದ್ಯಾಲಯದ ಅಧಿನಿಯಮ 2004 ಕಲಂ 8 ಹಾಗೂ ವಿಶ್ವವಿದ್ಯಾಲಯದ ಪರಿನಿಯಮ 2009 ನಿಯಮ 36 (4) (i) 36(4)(ii), KCSR

224(B), 235(A) (vii), 235 (B) (1) (A), ಹಾಗೂ KCSR 252B ರನ್ವಯ ದಿನಾಂಕ 01-04-2006 ರ ಹಿಂದೆ ಈ ರಾಜ್ಯದ ವಿಶ್ವವಿದ್ಯಾಲಯದಲ್ಲಿ ಸೇವೆಯಲ್ಲಿದ್ದು ಈ ವಿಶ್ವವಿದ್ಯಾಲಯದ ಅಧಿನಿಯಮ 2004 ಕಲಂ (8) ರಂತೆ ವರ್ಗಾವಣೆಗೊಂಡು ತದನಂತರ ಸದರಿ ಸೇವೆಯ ಆಧಾರದ ಮೇಲೆ ಹುದ್ದೆಗೆ ನೇಮಕಾತಿ ಹೊಂದಿ, ನಿವೃತ್ತಿಹೊಂದಿ ಹಾಗೂ ನಿವೃತ ಹೊಂದಲಿರುವ ಈ ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ಹಳೆಯ ಪಿಂಚಣಿಯನ್ನು ಮುಂದುವರೆಸುವುದು ತೀರ್ಮಾನಿಸಲಾಗಿರುತ್ತದೆ. (ಕೃವಿವಿ ಬೆಂಗಳೂರು ಮತ್ತು ಕೃವಿವಿ ಧಾರವಾಡದಿಂದ ಕಪಪಮೀವಿವಿ ಅಧಿನಿಯಮ 2004 ಕಲಂ (8) ರಂತೆ ವರ್ಗಾಯಿತಗೊಂಡ ನೌಕರರಿಗೆ ಮಾತ್ರ ಸೀಮಿತಗೊಳಿಸಿ). ಮುಂದುವರೆದು ದಿನಾಂಕ 01-04-2006 ರ ಹಿಂದೆ ರಾಜ್ಯದ ಬೇರೆ ಬೇರೆ ವಿಶ್ವವಿದ್ಯಾಲಯದಲ್ಲಿ ಸೇವೆಯಲ್ಲಿದ್ದು, ತದನಂತರ ಸದರಿ ಸೇವೆಯ ಆಧಾರದ ಮೇಲೆ ದಿನಾಂಕ 01-04-2006 ನಂತರ ಈ ವಿಶ್ವವಿದ್ಯಾಲಯದ ಹುದ್ದೆಗೆ ನೇಮಕಾತಿ ಹೊಂದಿ/ನಿವೃತ್ತಿ ಹೊಂದಿ ಹಾಗೂ ನಿವೃತ್ತಿ ಹೊಂದಲಿರುವ ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ಸದರಿ ನೇರನೇಮಕಾತಿ ದಿನಾಂಕದವರೆಗೆ ಹಳೆಯ ಪಿಂಚಣಿ ಸೌಲಭ್ಯವನ್ನು ನೀಡಿ ತದನಂತರದ ಅವಧಿಗೆ ಅರ್ಹ ಪಿಂಚಣಿ ಸೌಲಭ್ಯವನ್ನು ಕೆಸಿಎಸ್ಆರ್ ನಿಯಮ 339(ಎ) ರಂತೆ ಸರ್ಕಾರದ ಸ್ಪಷ್ಟೀಕರಣ ಪಡೆದು ಸೂಕ್ತ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು. (ಕೃವಿವಿ ಬೆಂಗಳೂರು ಮತ್ತು ಕೃವಿವಿ ಧಾರವಾಡದಿಂದ ಹಿಂದಿನ ಸೇವೆಯ ಆಧಾರದ ಮೇಲೆ ನೇಮಕಾತಿಗೊಂಡ ನೌಕರರಿಗೆ ಮಾತ್ರ ಸೀಮಿತಗೊಳಿಸಿ). ಮುಂದುವರೆದು ಸದರಿ ವಿಷಯದ ಮೇಲೆ ವಿಶ್ವವಿದ್ಯಾಲಯದಲ್ಲಿ ಮಾಡಿರುವ ಆದೇಶಗಳಲ್ಲಿ ಸಂಪೂರ್ಣ ಮಾಹಿತಿಯನ್ನು ನೀಡಿ ಪಿಂಚಣಿ ಆದೇಶ ನೀಡಲು ತೀರ್ಮಾನಿಸಲಾಯಿತು.

**(ಕ್ರಮ:ಕುಸ)**

**<u>Item No.04</u> ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ವತಿಯಿಂದ ಒದಗಿಸಲಾದ ಕಾಮಗಾರಿ ಅನುದಾನಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು**

**ನಿರ್ಣಯ**

ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ ಇವರು ತಮ್ಮ ಆದೇಶ ಸಂಖ್ಯೆ: ಕಕಪ್ರಅಮಂ:ಯೋಶಾ:ಪ್ರಾನಿ:ವಿಶ್ವವಿದ್ಯಾಲಯ:30:2024-25/11266 ದಿನಾಂಕ 22-01-2025 ರಲ್ಲಿ 2024-25ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ " ಉನ್ನತ ಶಿಕ್ಷಣ ಮತ್ತು ವಿಶ್ವವಿದ್ಯಾಲಯಗಳಿಗೆ" ಮೀಸಲಿಟ್ಟ ಅನುದಾನದಲ್ಲಿ ಈ ಕೆಳಕಂಡ ತ:ಖ್ತೆಯಲ್ಲಿ ತೋರಿಸಿರುವ 02 ಕಾಮಗಾರಿಗಳಿಗೆ ಒಟ್ಟು ರೂ. 19.04 ಕೋಟಿಗಳ (ಎಸ್‌ಸಿಪಿ-ರೂ. 3.08 ಕೋಟಿಗಳು, ಟಿಎಸ್‌ಪಿ ರೂ 1.07 ಕೋಟಿಗಳು ಮತ್ತು ಸಾಮಾನ್ಯ ರೂ.14.89 ಕೋಟಿಗಳು) ಮೊತ್ತಕ್ಕೆ ಮಂಡಳಿಯ ಸಭೆಯಲ್ಲಿ ಘಟನೋತ್ತರ ಮಂಜೂರಾತಿ ಪಡೆಯುವ ಷರತ್ತಿಗೊಳಪಟ್ಟು ಹಾಗೂ ಆದೇಶಗಳಲ್ಲಿ ತಿಳಿಸಿರುವ ಷರತ್ತುಗಳಿಗೆ ಒಳಪಟ್ಟು ಮಂಜೂರಾತಿ ನೀಡಿ ಅದೇಶಿಸಿರುತ್ತಾರೆ.

(Rs.in crores)

| SL. No. | University work details | Estimate Cost | SCP | TSP | GEN | Total |
|---|---|---|---|---|---|---|
| 01 | Development of Laboratory infrastructure items & Hostel room infrastructure at KVAFSU, Bidar | 9.56 | 1.55 | 0.54 | 7.47 | 9.56 |
| 02 | Development of Hostel infrastructure and Laboratory infrastructures, Dairy Science College, Kalburgi | 9.48 | 1.54 | 0.53 | 7.41 | 9.48 |
| | **Total** | **19.04** | **3.08** | **1.07** | **14.89** | **19.04** |

ಸದರಿ ಕಾಮಗಾರಿಗಳನ್ನು Gem/e.procurement ಮುಖೇನ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ಪಡೆದ ನಂತರ ಅನುಷ್ಠಾನಗೊಳಿಸಬೇಕಾಗಿರುತ್ತದೆ ಎಂದು ಕುಲಸಚಿವರು ವ್ಯವಸ್ಥಾಪಕ ಮಂಡಳಿ ಗಮನಕ್ಕೆ ತಂದರು. ಈ ಕುರಿತು ವ್ಯವಸ್ಥಾಪಕ ಮಂಡಳಿಯು ಸುದೀರ್ಘ ಚರ್ಚೆಯ ನಂತರ ಸದರಿ ಆದೇಶದಲ್ಲಿ ನೀಡಿರುವ ಎಲ್ಲಾ ಷರತ್ತುಗಳನ್ವಯ ಮುಂದಿನ ಕ್ರಮ ಜರುಗಿಸಲು ವ್ಯವಸ್ಥಾಪಕ ಮಂಡಳಿಯು ಆಡಳಿತಾತ್ಮಕ ಅನುಮೋದನ ನೀಡಿರುತ್ತದೆ. ನಡಾವಳಿ ಅನುಮೋದನೆ ಉಪೇಕ್ಷಿಸಿ ಕೂಡಲೇ ಮುಂದಿನ ಕ್ರಮ ಜರುಗಿಸಲು ವ್ಯವಸ್ಥಾಪಕ ಮಂಡಳಿಯ ತೀರ್ಮಾನಿಸಲಾಗಿರುತ್ತದೆ. (Action to be initiated without confirmation of the proceedings)

**(ಕ್ರಮ:ಕುಸ)**

**Item No.05 ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜಾನಗಳ ವಿಶ್ವವಿದ್ಯಾಲಯ, ಬೀದರ ಇಲ್ಲಿ ನಡೆದಿರುವ ಆಕ್ರಮಗಳಿಗೆ (ಶ್ರೀ.ರಜನೀಶ್ ಗೋಯಲ್ ವರದಿ) ಸಂಬಂಧಿಸಿದಂತೆ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವ ಕುರಿತು.**

**ನಿರ್ಣಯ**

ಕರ್ನಾಟಕ ವಿಧಾನ ಪರಿಷತ್ತಿನ ಅರ್ಜಿಗಳ ಸಮಿತಿ ಅರ್ಜಿ ಸಂಖ್ಯೆ 117/2010 ಕಪಪಮೀವಿವಿ, ಬೀದರ ಇಲ್ಲಿ ನಡೆದಿರುವ ಆಕ್ರಮಗಳಿಗೆ ಶ್ರೀ.ರಜನೀಶ್ ಗೋಯಲ್, ಅಂದಿನ ಪ್ರಾದೇಶಿಕ ಆಯುಕ್ತರು ಹಾಗೂ ವಿಚಾರಣಾಧಿಕಾರಿಗಳ ವರದಿಯಂತೆ ಆಕ್ರಮಗಳಿಗೆ ಸಂಬಂಧಿಸಿದಂತೆ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವ ಬಗ್ಗೆ ಅರ್ಜಿಗಳ ಸಮಿತಿಯಲ್ಲಿ ಪ್ರಕರಣ ಬಾಕಿಯಿರುತ್ತದೆ ಎಂದು ಹಾಗೂ ಮಾನ್ಯ ವ್ಯವಸ್ಥಾಪಕ ಮಂಡಳಿಯ ನಿರ್ಣಯದಂತೆ ದಿನಾಂಕ 12-9-2019 ರಂದು ಸದರಿ ವಿಷಯದ ಮೇಲೆ ವಿಶ್ವವಿದ್ಯಾಲಯದ ನಿರ್ಣಯವನ್ನು ಸರ್ಕಾರದ ಮುಖಾಂತರ ಮಾನ್ಯ ಅರ್ಜಿಗಳ ಸದನ ಸಮಿತಿಗೆ ಸಲ್ಲಿಸಿ ಪ್ರಕರಣ ಕೈಬಿಡಲು ಕೋರಲಾಗಿತ್ತು. ಆದರೆ ದಿನಾಂಕ 09-01-2025 ರಂದು ಜರುಗಿದ ಕರ್ನಾಟಕ ವಿಧಾನ ಪರಿಷತ್ತಿನ ಅರ್ಜಿಗಳ ಸಮಿತಿ ಅರ್ಜಿ ಸಂಖ್ಯೆ 117/2010 ರ ಬಗ್ಗೆ ಚರ್ಚಿಸಿ ವಿಶ್ವವಿದ್ಯಾಲಯದ ಮನವಿಯನ್ನು ಪರಿಗಣಿಸಿರುವುದಿಲ್ಲ ಹಾಗೂ ಸದರಿ ವಿಷಯದ ಮೇಲೆ ಸೂಕ್ತ ಕ್ರಮ ಜರುಗಿಸಲು ಸೂಚಿಸಿರುವ ಪ್ರಯುಕ್ತ ಕುಲಸಚಿವರು ವ್ಯವಸ್ಥಾಪಕ ಮಂಡಳಿ ಸಭೆಯ ಗಮನಕ್ಕೆ ತರಲಾಯಿತು.

ವ್ಯವಸ್ಥಾಪಕ ಮಂಡಳಿಯು ಸದರಿ ವಿಷಯದ ಮೇಲೆ ಸುದೀರ್ಘವಾಗಿ ಚರ್ಚಿಸಿ ಆರೋಪಿತರಾದ ಹಿಂದಿನ ವಿಶ್ವವಿದ್ಯಾಲಯ ಇಬ್ಬರು ಕುಲಸಚಿವರು ಹಾಗೂ ಮೂವರು ಕುಲಪತಿಗಳು ಸೇವೆಯಿಂದ ನಿವೃತ್ತಿ ಹೊಂದಿರುವದರಿಂದ ಹಾಗೂ ಶ್ರೀ.ರಜನೀಶ ಗೋಯಲ್ ವಿಚಾರಣಾ ವರದಿಯಲ್ಲಿಇರುವ ಪ್ರಕರಣಗಳು ಆಡಳಿತಾತ್ಮಕ ಲೋಪದೋಷ ಆಗಿರುವುದರಿಂದ ಹಾಗೂ ಸದರಿಯವರಿಗೆ ನೀಡಿರುವ ಕಾರಣ ಕೇಳಿ ನೋಟಿಸ್ ವಿವರಣೆಯಲ್ಲಿ ಸದರಿಯವರು ಕೈಗೊಂಡಿರುವ ಕ್ರಮವು ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಆಗಿರುವದರಿಂದ ಸರ್ಕಾರದ ಪತ್ರದಂತೆ ಸದರಿ ಅಪಾದಿತ ನಿವೃತ್ತ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಜರುಗಿಸಲು ಸೂಕ್ತವಲ್ಲವೆಂದು ಹಾಗೂ ಸದರಿ ಶಿಸ್ತಿನ ಕ್ರಮ ಸೂಚಿಸಿರುವ ತೀರ್ಮಾನವನ್ನು ಕೈಬಿಡಲು ಪುನ: ಸರ್ಕಾರ ಮತ್ತು ಮಾನ್ಯ ಅಧ್ಯಕ್ಷರು ಹಾಗೂ ಸದಸ್ಯರು ಕರ್ನಾಟಕ ವಿಧಾನ ಪರಿಷತ್ತಿನ ಅರ್ಜಿಗಳ ಸಮಿತಿಗೆ ವಿಶ್ವವಿದ್ಯಾಲಯದ ಪರವಾಗಿ ಮನವಿ ಮಾಡಿಕೊಳ್ಳಲು ವ್ಯವಸ್ಥಾಪಕ ಮಂಡಳಿಯು ತೀರ್ಮಾನಿಸಿರುತ್ತದೆ.

**ಕ್ರಮ:ಕುಸ**

**Item No.06 ಡಾ.ಮಂಜುನಾಥ.ಕೆ. ಪಶುವೈದ್ಯಾಧಿಕಾರಿ, ಪಶುಸಂಗೋಪನೆ ಮತ್ತು ಪಶು ವೈದ್ಯ ಸೇವೆ ಇಲಾಖೆ, ಬೆಂಗಳೂರು ಇವರು ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆ ಹೊಂದಿದ್ದು ವಿಶ್ವವಿದ್ಯಾಲಯದಲ್ಲಿ ವರದಿ ಮಾಡಿಕೊಳ್ಳಲು ಹೆಚ್ಚಿನ ಕಾಲಾವಕಾಶ ನೀಡುವ ಬಗ್ಗೆ**

**ನಿರ್ಣಯ**

ಸರ್ಕಾರದ ಕಾರ್ಯದರ್ಶಿಯವರು ದಿನಾಂಕ 21-1-2025 ರಂದು ವಿಶ್ವವಿದ್ಯಾಲಯಕ್ಕೆ ಪತ್ರ ಬರೆದು ಡಾ.ಮಂಜುನಾಥ ಕೆ, ಪಶುವೈದ್ಯಾಧಿಕಾರಿ ಇವರಿಗೆ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ವರದಿ ಮಾಡಿಕೊಳ್ಳಲು ಕೋರಿರುವ ಹೆಚ್ಚಿನ ಕಾಲಾವಕಾಶವನ್ನು ನೀಡುವ ಸಂಬಂಧ ವಿಶ್ವವಿದ್ಯಾಲಯದ ವ್ಯವಸ್ಥಾಪಕ ಮಂಡಳಿಯಲ್ಲಿ ಚರ್ಚಿಸಿ ಸೂಕ್ತ ನಿರ್ಣಯ ಕೈಗೊಳ್ಳುವಂತೆ ತಿಳಿಸಿರುತ್ತಾರೆ ಎಂದು ಕುಲಸಚಿವರು ಮಾನ್ಯ ವ್ಯವಸ್ಥಾಪಕ ಮಂಡಳಿ ಸಭೆಯ ಗಮನಕ್ಕೆ ತಂದರು.

ಈ ಕುರಿತು ವ್ಯವಸ್ಥಾಪಕ ಮಂಡಳಿಯು ಸುದೀರ್ಘ ಚರ್ಚಸಿ ಅಥಣಿ ಪಶುವೈದ್ಯಕೀಯ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಶೈಕ್ಷಣಿಕ ವರ್ಷ ಈಗಾಗಲೇ ಪ್ರಾರಂಭವಾಗಿರುವದರಿಂದ ಮತ್ತು ಮೊದಲನೇ ಶೈಕ್ಷಣಿಕ ವರ್ಷದ ವಿಷಯ (Veterinary Anatomy) ಆಗಿರುವದರಿಂದ ಸದರಿ ವಿಷಯದ ತಜ್ಞರಾಗಿ ಡಾ.ಕೆ.ಮಂಜುನಾಥ ರವರು ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅಯ್ಕೆ ಆಗಿರುವದರಿಂದ ವಿಶ್ವವಿದ್ಯಾಲಯದ ಹಾಗೂ ಮಹಾವಿದ್ಯಾಲಯದ ಹಿತದೃಷ್ಟಿಯಿಂದ ಸದರಿಯವರನ್ನು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಮಾರ್ಚ 15ನೇ, 2025 ರ ವರೆಗೆ ಕಾಲಾವಕಾಶ ನೀಡಲು (without making the present decision as a precedent and without the same having precedential value for any pupose whatsoever, and without any further correspondence in this matter shall be entertained) ಎಂಬ ಷರತ್ತಿಗನ್ವಯ ವ್ಯವಸ್ಥಾಪಕ ಮಂಡಳಿಯು ಅನುಮೋದನೆ ನೀಡಿರುತ್ತದೆ. ನಡಾವಳಿ ಅನುಮೋದನೆ ಉಪೇಕ್ಷಿಸಿ ಮುಂದಿನ ಕೂಡಲೇ ಕ್ರಮ ಜರುಗಿಸಲು ವ್ಯವಸ್ಥಾಪಕ ಮಂಡಳಿಯ ತೀರ್ಮಾನಿಸಲಾಗಿರುತ್ತದೆ. (Action to be initiated without confirmation of the proceedings)

**ಕ್ರಮ:ಕುಸ**

**Item No.07 Progress on the Establishment of Super Speciality Veterinary Hospital and Pet Park at MRS Land, Bengaluru**

**ನಿರ್ಣಯ**

MRS Land, Hebbal, Bangalore ಇಲ್ಲಿ Super Specialiaty Veterinary Hospital ಸ್ಥಾಪಿಸುವ ಸಂಬಂಧ ವಿಶ್ವವಿದ್ಯಾಲಯವು ಇದುವರೆಗೂ ಕೈಗೊಂಡಿರುವ ಕ್ರಮದ ಬಗ್ಗೆ ಕುಲಸಚಿವರು ಮಾನ್ಯ ವ್ಯವಸ್ಥಾಪಕ ಮಂಡಳಿ ಸಭೆಗೆ ಗಮನಕ್ಕೆ ತಂದರು. ಈ ಸಂಬಂಧ ವ್ಯವಸ್ಥಾಪಕ ಮಂಡಳಿಯು ಸುದೀರ್ಘ ಚರ್ಚೆಯ ನಂತರ ರಚಿಸಲಾದ ಸಮಿತಿಯು Broucher ಮತ್ತು videio clip ಗಳನ್ನು Potential donors ಗಳ ಪಟ್ಟಿ ಮಾಡಿ ಅವರ ಗಮನಕ್ಕೆ ತಂದು ದೇಣಿಗೆ ಸಂಗ್ರಹ ಮಾಡಲು ನಿರ್ಣಯಿಸಲಾಯಿತು.

**ಕ್ರಮ:ಕುಸ**

**<u>Item No.08</u> Proposal for Cloud-Based SaaS Module for Admission and Examination ERP at KVAFSU, Bidar**

**ನಿರ್ಣಯ**

ಸದರಿ ಪ್ರಸ್ತಾವನೆಯ ಕುರಿತು ವ್ಯವಸ್ಥಾಪಕ ಮಂಡಳಿಯು ಸುದೀರ್ಘವಾಗಿ ಚರ್ಚಿಸಿ ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳ ಹಿತದೃಷ್ಟಿಯಿಂದ ಪ್ರವೇಶ, ಪರೀಕ್ಷಾ, PDC, Degree Certificates ಹಾಗೂ ಇತರೆ ವಿದ್ಯಾವಿಷೇಯಕ ಸಂಬಂಧ ಪಟ್ಟ ಆಡಳಿತಾತ್ಮಕ ಅಂಶಗಳಿಗೆ ಅತೀ ಜರೂರಾಗಿರುವದರಿಂದ ಹಾಗೂ ಅವಶ್ಯಕತೆ ಇರುವದರಿಂದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯವರ ಸಂಖ್ಯೆ ಹೆಚ್ಚಾಗುತ್ತಿರುವದರಿಂದ ಶೈಕ್ಷಣಿಕ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸದರಿ Cloud Based Saas Module for Admission and Examination ನ್ನು KTPP ನಿಯಮಾವಳಿ ಪ್ರಕಾರ ಟೆಂಡರ್ ಕರೆದು ಮುಂದಿನ ಕ್ರಮ ಜರುಗಿಸಲು ವ್ಯವಸ್ಥಾಪಕ ಮಂಡಳಿಯು ಅನುಮೋದನೆ ನೀಡಿರುತ್ತದೆ.

**(ಕ್ರಮ:ಕುಸ)**

**ವಿಶೇಷ ವ್ಯವಸ್ಥಾಪಕ ಮಂಡಳಿಸಭೆಯಲ್ಲಿ ಚರ್ಚಿಸಿದ ಇತರೆ ವಿಷಯಗಳು**

1. **ಬೋಧಕ ಮತ್ತು ಬೋಧಕೇತರ ಬ್ಯಾಕಲಾಗ್ ಹುದ್ದೆಗಳ ಭರ್ತಿ:** ಮಾನ್ಯ ವ್ಯವಸ್ಥಾಪಕ ಮಂಡಳಿಯು ವಿಶ್ವವಿದ್ಯಾಲಯದಡಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ನಿಯಮಾವಳಿ ಪ್ರಕಾರ ಭರ್ತಿ ಮಾಡಲು ಅಧಿಸೂಚನೆ ಹೊರಡಿಸಲು ಕ್ರಮ ಜರುಗಿಸುವಂತೆ ಸೂಚಿಸಲಾಯಿತು.
2. **371 (j) ಕಲ್ಯಾಣ ಕರ್ನಾಟಕ ಭಾಗದ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಭರ್ತಿ:** ಮಾನ್ಯ ವ್ಯವಸ್ಥಾಪಕ ಮಂಡಳಿಯು ವಿಶ್ವವಿದ್ಯಾಲಯದಡಿ ಸಿಬ್ಬಂದಿಗಳ ಕೊರತೆಯಿದ್ದು ಸರ್ಕಾರ ಈಗಾಗಲೇ ಅನುಮತಿ ನೀಡಲಾದ ಕಲ್ಯಾಣ ಕರ್ನಾಟಕ ಭಾಗದ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಭರ್ತಿ ಕುರಿತಂತೆ ಕೂಡಲೇ ಕ್ರಮ ಜರುಗಿಸುವಂತೆ ಸೂಚಿಸಲಾಯಿತು.
3. **ಪಶುರೋಗ ತನಿಖಾ ಪ್ರಯೋಗಾಲಯ ಮತ್ತು ಮಾಹಿತಿ ಕೇಂದ್ರ, ವಿಜಯಪುರ ಪ್ರಾರಂಭಿಸುವ ಬಗ್ಗೆ:** ವ್ಯವಸ್ಥಾಪಕ ಮಂಡಳಿಯು ಪಶು ರೋಗ ತನಿಖಾ ಪ್ರಯೋಗಾಲಯ ಮತ್ತು ಮಾಹಿತಿ ಕೇಂದ್ರ, ವಿಜಯಪುರ ಪ್ರಾರಂಭಿಸುವ ಬಗ್ಗೆ ಕೂಡಲೇ ಕ್ರಮ ಜರುಗಿಸುವಂತೆ ಸೂಚಿಸಲಾಯಿತು.
4. **ವಿಶ್ವವಿದ್ಯಾಲಯದ ವಿವಿಧ ಕಾರ್ಯಕ್ರಮಗಳಿಗೆ ವ್ಯವಸ್ಥಾಪಕ ಮಂಡಳಿ ಸದಸ್ಯರನ್ನು ಅಹ್ವಾನಿಸುವುದು:** ವಿಶ್ವವಿದ್ಯಾಲಯದಡಿ ಜರುಗುವ ಕ್ರೀಡಾಕೂಟ ಮತ್ತು ಯುವಜನೋತ್ಸವಕ್ಕೆ ಎಲ್ಲಾ ವ್ಯವಸ್ಥಾಪಕ ಮಂಡಳಿ ಸದಸ್ಯರು ಅಹ್ವಾನಿಸುವಂತೆ ತೀರ್ಮಾನಿಸಲಾಯಿತು ಹಾಗೂ ರೈತರಿಗೆ/ಸಂಬಂಧಿಸಿದ ಮುಖ್ಯವಾದ ಕಾರ್ಯಕ್ರಮಗಳಿಗೆ ಆಯಾ ವಲಯಗಳಿಗೆ ಸೀಮಿತವಾಗಿ ಅಹ್ವಾನಿಸುವುದು.
5. ಹೆಬ್ಬಾಳ ಆವರಣದಲ್ಲಿ ಆಯೋಜಿಸಲಾಗುವ ಕಾಲೇಜು ಸಂಸ್ಥಾಪನಾ ದಿನಾಚರಣೆ, ಸ್ವಾತಂತ್ರ ದಿನಾಚರಣೆ, ಗಣರಾಜೋತ್ಸವ, ಕನ್ನಡ ರಾಜೋತ್ಸವ ಇತರೆ ಕಾರ್ಯಕ್ರಮಗಳಲ್ಲಿ ಹೆಬ್ಬಾಳ ಆವರಣದ ಸಿಬ್ಬಂದಿಗಳು ಭಾಗವಹಿಸದೇ ಗೈರು ಹಾಜರಾಗುತ್ತಿರುವ ವಿಷಯ ವ್ಯವಸ್ಥಾಪಕ ಮಂಡಳಿಯು ಗಂಭೀರವಾಗಿ ಪರಿಗಣಿಸಿದೆ. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಸಿಬ್ಬಂದಿಗಳು ಕಡ್ಡಾಯವಾಗಿ ಭಾಗವಹಿಸುವಂತೆ ಸೂತ್ತೋಲೆ ಹೊರಡಿಸಲು ಸೂಚಿಸಲಾಯಿತು. ಒಂದು ವೇಳೆ ಇದೇ ರೀತಿ ಮುಂದೆ ಗೈರು ಹಾಜರಾತಿ ಕಂಡು ಬಂದಲ್ಲಿ ಶಿಸ್ತಿನ ಕ್ರಮ ಜರುಗಿಸುವಂತೆ ವ್ಯವಸ್ಥಾಪಕ ಮಂಡಳಿಯಲ್ಲಿ ತೀರ್ಮಾನಿಸಲಾಯಿತು.

6. **ಗುತ್ತಿಗೆ ವೈದ್ಯಾಧಿಕಾರಿಗಳ ನೇಮಕ :** ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ/ಕೇಂದ್ರ ಕಚೇರಿ ಆವರಣದಲ್ಲಿ ಮಾನವ ಚಿಕಿತ್ಸಾಲಯಕ್ಕೆ ಪೂರ್ಣಾವಧಿ ಗುತ್ತಿಗೆ ವೈದ್ಯಾದಿಕಾರಿಗಳನ್ನು ನೇಮಕ ಮಾಡಿಕೊಳ್ಳಲು ವ್ಯವಸ್ಥಾಪಕ ಮಂಡಳಿಯು ತೀರ್ಮಾನಿಸಲಾಯಿತು.

Meeting ended with vote of thanks by Registrar & Member Secretary

(P.T.Ramesh)
Registrar & Member Secretary

(K.C.Veeranna)
Hon'ble Vice Chancellor
& Chairman